**ಸಾಕ್ಷಿಗೆ ದಿನಾಂಕಃ 07.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಬಿ.ಎನ್. ವಕೀಲರಿಂದಃ**

ನಿ.ಪಿ.24 ರಲ್ಲಿ ನಮೂದು ಮಾಡಿರುವ ಸ್ವತ್ತನ್ನು ಸರ್ಕಾರದವರು ನನ್ನ ಹೆಂಡತಿಯ ಹೆಸರಿಗೆ ಹಕ್ಕು ಪತ್ರವನ್ನು ನೀಡಿರುತ್ತಾರೆ. ಹಕ್ಕು ಪತ್ರವನ್ನು ಯಾರು ನೀಡಿರುತ್ತಾರೆ ಎಂದು ನನಗೆ ನೆನಪಿಲ್ಲ. ಮೂಲ ಹಕ್ಕು ಪತ್ರವನ್ನು ಹಾಜರುಪಡಿಸಿರುವ ಬಗ್ಗೆ ನನಗೆ ನೆನಪಿಲ್ಲ. ಸರ್ಕಾರದವರು ಹಕ್ಕು ಪತ್ರವನ್ನು ನೀಡಿಲ್ಲದ ಕಾರಣ ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.24 ರ ವಿಸ್ತೀರ್ಣ 30 x 15 ಅಡಿ ಇರುತ್ತದೆ. ಅದರ ಚೆಕ್ಕು ಬಂದಿ ಪೂರ್ವಕ್ಕೆ ಕರೀಂ ಸಾಹೆಬರ ಜಾಗ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸಿದ್ದಯ್ಯನವರ ನಿವೇಶನ, ದಕ್ಷಿಣಕ್ಕೆ ಕರೀಂ ಸಾಹೇಬ್ ರವರ ಜಾಗ. ನಾನು ಹೇಳಿದ ಚೆಕ್ಕುಬಂದಿಯ ಒಳಗೆ ಯಾವುದೇ ನಿವೇಶನ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ನಿವೇಶನವನ್ನು ಯಾವ ವರ್ಷದಲ್ಲಿ ಮಂಜೂರು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಅಸಲು ದಾವಾ ಸಂ.17/1992 ನ್ನು ಮಂಡಲ ಪಂಚಾಯಿತಿ ಮತ್ತು ಈ ದಾವೆಯ 3 ನೇ ಪ್ರತಿವಾದಿಯ ವಿರುದ್ಧ ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ಸದರಿ ನಿವೇಶನವನ್ನು ನಮೂದು ಮಾಡಿರುವ ಬಗ್ಗೆ ನನಗೆ ನೆನಪಿಲ್ಲ. ಸದರಿ ನಿವೇಶನವನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ದಾವೆಯ ದಾವಾ ಸ್ವತ್ತನ್ನು ದಿ.14.12.2018 ರಂದು ಕೆ.ಎಸ್. ದಿನೇಶ್ ರವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ದಿ.14.12.2018 ರ ಕ್ರಯಪತ್ರದ ದೃಡಿಕೃತ ನಕಲನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿದ್ದು, ಅದನ್ನು ನಿ.ಡಿ.7 ಎಂದು ಗುರುತಿಸಲಾಯಿತು. ಮಾರಾಟ ಮಾಡಿದ ದಿನದಿಂದ ದಾವಾ ಸ್ವತ್ತು ಸದರಿ ದಿನೇಶ್ ರವರ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿ. ಸದರಿ ವಿಚಾರವನ್ನು ದಾವಾ ಪತ್ರದಲ್ಲಿ ತಿಳಿಸಿರುವ ಬಗ್ಗೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸದರಿ ವಿಚಾರವನ್ನು ಮರೆಮಾಚಿರುತ್ತೇನೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂ.17/1992 ರ ಆದೇಶದ ವಿರುದ್ಧ ಈ ದಾವೆಯ 3 ನೇ ಪ್ರತಿವಾದಿಯು ಆರ್.ಎ.ಸಂ.127/2001 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮೂದು ಮಾಡಿದ 'ಎ' ಸ್ವತ್ತಿನ ವಿಸ್ತೀರ್ಣ 35 x 25 ಅಡಿ ಇರುತ್ತದೆ. 'ಬಿ' ದಾವಾ ಸ್ವತ್ತಿನ

ವಿಸ್ತೀರ್ಣ 25 x 50 ಅಡಿ ಎಂದು ನಮೂದು ಮಾಡಿರುತ್ತೇನೆ. ಸದರಿ ದಾವೆಯಲ್ಲಿ 2 ನೇ ಪ್ರತಿವಾದಿಯು ತನಗೆ ಮಂಜೂರಾದ ನಿವೇಶನದ ಸಂ.26 ಮತ್ತು ವಿಸ್ತೀರ್ಣ 30 x 40 ಅಡಿ ಎಂದು ಹೇಳಿದ್ದರು ಎಂದರೆ ಸರಿ. ಸದರಿ ನಿವೇಶನವು ನಮ್ಮ ಸ್ವತ್ತಿನ ಅಂಚಿಗೆ ಬರುತ್ತದೆ ಎಂದರೆ ಸರಿ. ಆದಕಾರಣ ಮುಂದುವರೆದು ಸಾಕ್ಷಿಯು ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಈ ದಾವೆಯ 3 ನೇ ಪ್ರತಿವಾದಿ ಸಲ್ಲಿಸಿದ ಆರ್.ಎ.ಸಂ.127/2001 ನ್ನು ನಾವುಗಳು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ರಾಜಿಯ ಅರ್ಜಿಯಲ್ಲಿ ಬರೆದ ವಿಚಾರ ನನಗೆ ಈಗ ನೆನಪಿಲ್ಲ. ಸದರಿ ರಾಜಿ ಅರ್ಜಿಯಲ್ಲಿ ಪೂರ್ವ-ಪಶ್ಚಿಮ 11 ಅಡಿಯನ್ನು ಉತ್ತರ ದಕ್ಷಿಣವಾಗಿ 3 ನೇ ಪ್ರತಿವಾದಿ ಬಿಡಬೇಕೆಂದು ಎಂದು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಉತ್ತರ ದಕ್ಷಿಣದ ಅಳತೆಯನ್ನು ಸ್ಪಷ್ಟವಾಗಿ ನಮೂದು ಮಾಡಿರುವುದಿಲ್ಲ ಎಂದರೆ ನನಗೆ ನೆನಪಿಲ್ಲ. ನಿ.ಪಿ.9 ರಂತೆ ಸದರಿ ಅಪೀಲು ಡಿಕ್ರಿ ಆಗಿರುತ್ತದೆ ಎಂದರೆ ಸರಿ.

ಅಸಲು ದಾವಾ ಸಂ.417/1990 ನ್ನು ಬೈರಾಪುರ ಮಂಡಲ ಪಂಚಾಯಿತಿ ಕಾರ್ಯದರ್ಶಿಯವರ ವಿರುದ್ಧ ಸಲ್ಲಿಸಿದ್ದೆನು ಎಂದರೆ ಸರಿ. ನಂತರ ಸದರಿ ದಾವೆಯನ್ನು ವಾಪಸ್ಸು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ವಿಚಾರ ನಿ.ಪಿ.5 ರಲ್ಲಿ ನಮೂದು ಆಗಿರುತ್ತದೆ ಎಂದರೆ ಸರಿಯಲ್ಲ. ಈ ದಾವೆಯ ವಿಚಾರಗಳು ನನಗೆ ನೆನಪಿಲ್ಲ. ದಾವಾ 'ಎ' ಸ್ವತ್ತಿನ ಪೂರ್ವ-ಪಶ್ಚಿಮ 35 ಮತ್ತು ಉತ್ತರ-ದಕ್ಷಿಣ 25 ಅಡಿ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ದಾವಾ 'ಬಿ' ಸ್ವತ್ತಿನಲ್ಲಿ ಉತ್ತರ ದಕ್ಷಿಣದ ರಸ್ತೆಯ ಉದ್ದವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ರಂತೆ ಕಚ್ಚಾ ನಕಾಶೆಯನ್ನು ಹಾಜರುಪಡಿಸಿರುತ್ತೇನೆ ಎಂದರೆ ಸರಿ. ನಿ.ಪಿ.11 ರಲ್ಲಿ 3 ನೇ ಪ್ರತಿವಾದಿಯ ನಿವೇಶನವನ್ನು ತೋರಿಸಿರುವುದಿಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಪೂರ್ವಕ್ಕೆ ಖಾಸಗಿ ನಿವೇಶನ ಎಂದು ನಮೂದು ಮಾಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಯಲ್ಲಿ ಖಾಸಗಿ ನಿವೇಶನದ ಅಂಚಿನಿಂದ ನನ್ನ ನಿವೇಶನದವರೆಗೆ 11 ಅಡಿ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಖಾಸಗಿ ನಿವೇಶನದಿಂದ ನನ್ನ ನಿವೇಶನದವರೆಗೆ 30 ಅಡಿ ಬರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಸಲುವಾಗಿ ಸದರಿ ಆರ್.ಸಂ.127/2001 ರಲ್ಲಿ 11 ಅಡಿಯನ್ನು ಬಿಟ್ಟುಕೊಡುವಂತೆ ಒಪ್ಪಿಕೊಂಡಿದ್ದು, ಉಳಿದ ಸ್ವತ್ತನ್ನು ಈ ದಾವೆಯ 3 ನೇ ಪ್ರತಿವಾದಿ ಉಪಯೋಗಿಸಿಕೊಳ್ಳತಕ್ಕದ್ದು ಎಂದು ರಾಜಿ ಮಾಡಿಕೊಂಡಿದ್ದರೂ ಈ ದಾವೆಯ್ನುನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನಿ.ಡಿ.2 ರಂತೆ 1 ನೇ ಪ್ರತಿವಾದಿಗೆ ನಿವೇಶನದ ಸಂ.25 ನ್ನು 40 x30 ಅಡಿಗೆ 1982 ರಲ್ಲಿ ಮಂಜೂರು ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹೆಸರಿಗೆ ನಿವೇಶನದ ಸಂ.25 ಕ್ಕೆ ಖಾತೆ ಆಗಿರುತ್ತದೆ ಎಂದರೆ ಸರಿಯಲ್ಲ. ಸದರಿ ನಿವೇಶನವು ನಿವೇಶನದ ಸಂ.198 ರ ಪಕ್ಕದಲ್ಲಿ ಮಂಜೂರು ಆಗಿರುತ್ತದೆ ಎಂದು ನಿ.ಪಿ.11 ರಲ್ಲಿ ತೋರಿಸಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ.11 ರಲ್ಲಿ ಉತ್ತರ ಮತ್ತು ದಕ್ಷಿಣಕ್ಕೆ ಉದ್ದ ಮತ್ತು ಅಳತೆಯನ್ನು ತೋರಿಸಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಮಂಜೂರಾದ ನಿವೇಶನದ ಪಕ್ಕದಲ್ಲಿ ಯಾವುದೇ ದಾರಿ ಇಲ್ಲದ ಕಾರಣ ನಿ.ಪಿ.11 ರಲ್ಲಿ ಅಳತೆ ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ನ್ನು ತಯಾರಿಸಲು ಯಾರು ಮಾಹಿತಿ ನೀಡಿದ್ದರು ಎಂದು ನನಗೆ ನೆನಪಿಲ್ಲ. ನಿ.ಪಿ.23 ರಲ್ಲಿ ರಸ್ತೆ ಮತ್ತು ಒಳರಸ್ತೆಗಳನ್ನು ತೋರಿಸಿರುವುದಿಲ್ಲ ಎಂದರೆ ಸರಿ. ನಿ.ಪಿ.23 ರಲ್ಲಿ ನಿವೇಶನದ ಸಂ.199 ಯಾವ ಸರ್ವೆ ನಂಬರಿನಲ್ಲಿ ಬರುತ್ತದೆ ಎಂದು ನಮೂದು ಇರುವುದಿಲ್ಲ. ಸದರಿ ದಾಖಲೆಯಲ್ಲಿ ಗುರುತು ಮಾಡಿದ ಜಾಗವು ಸರ್ಕಾರಕ್ಕೆ ಸೇರಿರುತ್ತದೆ ಎಂದರೆ ಸರಿ. ಸದರಿ ಜಾಗದಲ್ಲಿ 1 ಮತ್ತು 3 ನೇ ಪ್ರತಿವಾದಿಗಳಿಗೆ ನಿವೇಶನಗಳನ್ನು ಸರ್ಕಾರದವರು ನೀಡಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯು ನಿವೇಶನ ಸಂ.25 ರಲ್ಲಿ ಕಾಂಪೌಂಡನ್ನು ನಿರ್ಮಿಸಿರುತ್ತಾರೆ ಎಂದರೆ ಸರಿಯಲ್ಲ. ಆದ್ದರಿಂದ ಉತ್ತರ ದಕ್ಷಿಣವಾಗಿ ಸದರಿ ನಿವೇಶನದ ಪೂರ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ನಿ.ಪಿ.24 ರಂತೆ ದಕ್ಷಿಣ ಉತ್ತರವಾಗಿ ರಸ್ತೆಯನ್ನು ತೋರಿಸಿರುವುದಿಲ್ಲ ಎಂದರೆ ಸರಿಯಲ್ಲ. ರಾಜಿ ಅರ್ಜಿಯಂತೆ ನನ್ನ ನಿವೇಶನದ ಉತ್ತರ ಭಾಗದಲ್ಲಿ ಹೋಗಲು 11 ಅಡಿ ಜಾಗ ಇರುತ್ತದೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ಮಂಜೂರಾದ ನಿವೇಶನದ ಸಂ.26 ರಂತೆ ಉತ್ತರದ ಕಡೆ ರಸ್ತೆ , ದಕ್ಷಿಣಕ್ಕೆ ಉಳಿಕೆ ನಾಲೆ ರಸ್ತೆ, ಪೂರ್ವಕ್ಕೆ ಕರೀಂ ಸಾಹೇಬರ ಸ್ವತ್ತು, ಪಶ್ಚಿಮಕ್ಕೆ ನಿವೇಶನದ ಸಂ.119 ಎಂದರೆ ಸರಿಯಲ್ಲ. ಆದ್ದರಿಂದ ಉತ್ತರ ಮತ್ತು ದಕ್ಷಿಣದ ಕಡ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ನಿವೇಶನದ ದಕ್ಷಿಣದ ಕಡೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂ.17/1992 ಮತ್ತು 417/1990 ರಲ್ಲಿ 1 ನೇ ಪ್ರತಿವಾದಿಯು ಪಕ್ಷಗಾರರಲ್ಲ ಎಂದರೆ ನನಗೆ ನೆನಪಿಲ್ಲ. 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ. ರಾಜಿ ಅರ್ಜಿಯಂತೆ ಪೂರ್ವ ಪಶ್ಚಿಮ 11 ಅಡಿ ಉತ್ತರ ದಕ್ಷಿಣ 50 ಅಡಿಯು ನನ್ನ ನಿವೇಶನದ ದಕ್ಷಿಣದಿಂದ ಉತ್ತರದ ಕಡೆಗೆ ಬರುತ್ತದೆ ಎಂದು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿ.ಪಿ.11 ರಂತೆ 2 ನೇ ಪ್ರತಿವಾದಿಯ ನಿವೇಶನದಿಂದ 1 ನೇ ಪ್ರತಿವಾದಿಯ

ನಿವೇಶನದ ತುದಿಯವರೆಗೆ 105 ಅಡಿ ಉದ್ದ ಬರುತ್ತದೆ ಎಂದರೆ ಸರಿ. ನನ್ನ ನಿವೇಶನದ ದಕ್ಷಿಣದಿಂದ ಉತ್ತರದ ಕಡೆಯ ರಸ್ತೆಯವರೆಗೆ 50 ಅಡಿ ಬರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ನಿವೇಶನದ ಪೂರ್ವಕ್ಕೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಿದ ಕಾರಣ ದಾವಾ ಸ್ವತ್ತಿನ ಮೇಲೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.24 ರಲ್ಲಿ ನಮೂದು ಮಾಡಿರುವ ನಿವೇಶನವು ಅಸ್ತಿತ್ವದಲ್ಲಿ ಇಲ್ಲದೆ ಇದ್ದರೂ ಸಹ 1 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ದಾವೆಯನ್ನು ಸಲ್ಲಿಸಿರುತ್ತೆನೆ ಎಂದರೆ ಸರಿಯಲ್ಲ. ಆದ್ದರಿಂದ ಈ ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ಅರ್ಹನಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**